# ನರ್ತಿಸುವ ಹೂವು!

■ ಚಿತ್ರ ಬರಹ:
**ಸುಭಾಸ ಯಾದವಾಡ**





ವಿಜಾಪುರದ ಪೊಲೀಸ್ ಗಾರ್ಡನ್ನಿನಲ್ಲಿ ಕೇವಲ ಎರಡು ಹೂವುಗಳ ಅರಳಿದ್ದವು. ಸಮೀಪ ಹೋಗಿ ನೋಡಿದರೆ, ವಾಹ್! ಎಂತಹ ವಿಭಿನ್ನ ಹಾಗೂ ಸುಂದರ ಹೂವುಗಳು ಎನಿಸಿತು.

ಆದರೆ ಅವು ಯಾವ ಹೂವುಗಳು? ಅಲ್ಲಿರುವ ಕೆಲವರನ್ನು ಕೇಳಿದರೆ ಗೊತ್ತಿಲ್ಲ ಎಂದರು. ಸಸ್ಯಶಾಸ್ತ್ರದ ನನ್ನ ಮಿತ್ರರೊಬ್ಬರನ್ನು ಕರೆದು ಕೇಳಿದೆ. ಅವರು 'ಮೇ ಫ್ಲವರ್' ಎಂದರು. 'ಮೇ ತಿಂಗಳಲ್ಲಿ ಅಲ್ಲದೇ ಜೂನ್, ಜುಲೈ ತಿಂಗಳಲ್ಲೂ ಈ ಹೂವುಗಳು ಅರಳುತ್ತವೆ' ಎಂದು ಇನ್ನೊಬ್ಬರು ಹೇಳಿದರು.

ರಕ್ತವರ್ಣದ ಈ ಹೂವಿಗೆ ಬ್ಲಡ್ ಲಿಲಿ ಎಂದು ಕರೆಯುತ್ತಾರೆ. ಅದರ ಕಡ್ಡಿಯಂತಹ ಎಸಳುಗಳು ಬೆಂಕಿಯ ಕೆನ್ನಾಲಿಗೆಗಳಂತೆ ಚಾಚಿಕೊಂಡಿರುತ್ತವೆ. ಹೀಗಾಗಿ ಅದಕ್ಕೆ 'ಫೈರ್ ಬಾಲ್ ಲಿಲಿ' ಎಂಬ ಹೆಸರೂ ಇದೆ. ತೀರಾ ಅಪರೂಪದ ಈ ಹೂವಿನ ಮೂಲ ದಕ್ಷಿಣ ಆಫ್ರಿಕಾ ಆಗಿರುವುದರಿಂದ 'ಆಫ್ರಿಕನ್ ಬ್ಲಡ್ ಲಿಲಿ' ಎಂದೂ, ಇಡೀ ಹೂವು ಗೋಲಾಕಾರ ಆಗಿರುವುದರಿಂದ 'ಫುಟ್ಬಾಲ್ ಲಿಲಿ' ಎಂದೂ ಗುರುತಿಸುವುದುಂಟು. ಇದಲ್ಲದೇ ಪಿನ್ ಕುಶನ್ ಲಿಲಿ ಹಾಗೂ ಕೇಪ್ ಟುಲಿಪ್ ಎಂಬ ಹೆಸರುಗಳೂ ಇವೆ.

ಸ್ಕ್ಯಾಂಡೋಕ್ಸಸ್ ಗುಂಪಿನ 50 ಹೂವುಗಳಲ್ಲಿ ಈ ಬ್ಲಡ್ ಲಿಲಿಯೂ ಒಂದು. ಇವೆಲ್ಲ ಅಮರಿಲಿಡೇಸಿಯಾ ಕುಟುಂಬಕ್ಕೆ ಸೇರಿದ ಸಸಿಗಳು. ಸಾಮಾನ್ಯವಾಗಿ ಬ್ಲಡ್ ಲಿಲಿ, ಒಂದರಿಂದ ಎರಡು ಅಡಿ ಎತ್ತರಕ್ಕೆ ಬೆಳೆಯುತ್ತವೆ. ಸ್ವಲ್ಪ ಸೂರ್ಯ ಪ್ರಕಾಶ ಹಾಗೂ ಸ್ವಲ್ಪ ನೆರಳು ಇವುಗಳಿಗೆ ಬೇಕು. ನೀರು ಬಸಿದು ಹೋಗುವ ಸಮೃದ್ಧವಾದ ಮಣ್ಣು ಇವುಗಳ ಬೆಳವಣಿಗೆಗೆ ಅವಶ್ಯಕ. 4 ರಿಂದ 6 ಅಂಗುಲ ಸುತ್ತಳತೆಯುಳ್ಳ, ಪರಿಪೂರ್ಣ ಗೋಲಾಗಿರುವ ಈ ಹೂವು ಒಂದು ಪುಷ್ಪ ಗುಚ್ಛದಂತಿರುತ್ತದೆ. ಅದರಲ್ಲಿ ತೀರ ಸಣ್ಣ ಹೂವುಗಳನ್ನು ನಯ–ನಾಜೂಕಿನಿಂದ ಹೆಣೆದು ಕಟ್ಟಿದಂತಿರುತ್ತದೆ. ಒಂದೊಂದು ಹೂವಲ್ಲೂ ಸುಮಾರು 200ರವರೆಗೆ ಇಂಥ ಪುಟ್ಟ ಹೂವುಗಳ ಜೋಡಣೆ ಇರುತ್ತದೆಯಂತೆ. ಎಲ್ಲವೂ ಬಿಡಿಬಿಡಿಯಾಗಿದ್ದು ನೋಡಲು ಮನೋಹರವಾಗಿರುತ್ತವೆ. ಅವುಗಳನ್ನು ಎಣಿಸುವುದು ಮಾತ್ರ ತುಂಬ ಕಷ್ಟ.

ಮಂದ ಗಾಳಿಗೆ ಈ ಹೂವುಗಳು ತೊನೆಯುತ್ತಿದ್ದರೆ, ನರ್ತಕಿಯೊಬ್ಬಳು ನರ್ತಿಸುತ್ತಾಳೇನೋ ಎಂಬ ಭಾವ ಮೂಡುತ್ತದೆ. ಅದಕ್ಕೆಂದೇ ಈ ಹೂವಿಗೆ ನರ್ತಿಸುವ ಹೂವು ಎಂಬ ಅನ್ವರ್ಥಕ ನಾಮವೂ ಇದೆ. ಈ ಹೂವುಗಳಲ್ಲಿ ವಿಷಪೂರಿತ ಟಾಕ್ಸಿಕ್ ಅಲ್ಕಲೊಯಿಡ್ಸ್ ಇರುವುದರಿಂದ, ಹೂವು ಕೀಳುವಾಗ ಎಚ್ಚರಿಕೆ ವಹಿಸುವ ಅವಶ್ಯಕತೆ ಇದೆ. ಈ ವಿಷದಿಂದಾಗಿ ಮಾನವ ಹೃದಯಕ್ಕೆ ತೊಂದರೆ ಉಂಟಾಗುವ ಸಾಧ್ಯತೆ ಇದೆಯಂತೆ.